

ಒಂದೇ ಫ್ರೇಮ್‌ನಲ್ಲಿ ಗುಳ್ಳೆನರಿ ಮತ್ತು ನವಿಲು

# ರಾಗದ್ವೇಷಗಳಾಚೆ ಜೀವನಸೌಂದರ್ಯ

■ ಡಾ. ಸಿದ್ರಾಮೇಶ್ ಮುತ್ತಗಿ, ಚೇತನಾ ಜೋಶಿ

ಪಕ್ಷಿ ವೀಕ್ಷಣೆ ಮತ್ತು ವನ್ಯಜೀವಿ ಛಾಯಾಗ್ರಹಣ ಮಾಡುವುದು ನಮ್ಮ ಹವ್ಯಾಸ. ಒಂದು ಭಾನುವಾರ, ಪಕ್ಷಿ ವೀಕ್ಷಣೆಯ ಜತೆಗೆ ಒಂದಿಷ್ಟು ಫೋಟೊಗಳನ್ನು ಕ್ಲಿಕ್ಕಿಸಿಕೊಂಡು ಬರೋಣವೆಂದು, ಕ್ಯಾಮೆರಾದೊಂದಿಗೆ ಬೆಳಿಗ್ಗೆಯೇ ಹುಬ್ಬಳ್ಳಿ ಹೊರವಲಯದತ್ತ ಕಾರಿನಲ್ಲಿ ಹೊರಟೆವು.

ಅರೆ ಮಲೆನಾಡಿನಂತಿರುವ ಸುತಗಟ್ಟಿ ಬಳಿಯ ಕುರುಚಲು ಕಾಡಿನ ಸಣ್ಣ ಗುಡ್ಡಗಾಡಿನ ರಸ್ತೆ ಪಕ್ಕ ಕಾರು ನಿಲ್ಲಿಸಿದೆವು. ಮಂಜು ಮುಸುಕಿದ ಪ್ರಕೃತಿ ಮೋಡಿ ಮಾಡುವಂತಿತ್ತು. ಮೋಹಕ ಪ್ರಕೃತಿಯೊಂದಿಗೆ, ಒಂದಿಷ್ಟು ಪಕ್ಷಿಗಳನ್ನೂ ಕ್ಯಾಮೆರಾದಲ್ಲಿ ಸೆರೆಹಿಡಿದೆವು. ಆದರೂ, ತೀರಾ ಅಚ್ಚರಿಪಡುವಂತಹದ್ದೇನು ಕಾಣಲಿಲ್ಲವಲ್ಲ ಅಂದುಕೊಂಡು ಮನೆಗೆ ಹೊರಡಲು ಅಣಿಯಾದೆವು. ಇನ್ನೇನು ಕಾರನ್ನು ಸ್ಟಾರ್ಟ್ ಮಾಡಬೇಕು, ಹೆಣ್ಣು ನವಿಲೊಂದು ರಸ್ತೆಯಂಚಿಗೆ ಬಂದು ಮತ್ತೆ ಕಾಡಿನೊಳಕ್ಕೆ ಹೋಗುತ್ತಿದ್ದ ದೃಶ್ಯ ಅನತಿ ದೂರದಲ್ಲಿ ಕಣ್ಣಿಗೆ ಬಿತ್ತು.

ತಕ್ಷಣ ಇಬ್ಬರೂ ಕ್ಯಾಮೆರಾ ಕೈಗೆತ್ತಿಕೊಂಡು ನವಿಲು ಕಾಣಿಸಿದ ಕಡೆಗೆ ದೃಷ್ಟಿ ಹಾಯಿಸಿದೆವು. ಒಂದು ಕ್ಷಣ ನಮ್ಮ ಕಣ್ಣನ್ನು ನಾವೇ ನಂಬಲಾಗಲಿಲ್ಲ. ತನ್ನಷ್ಟಕ್ಕೆ ತಾನು ನಿರಾಂತಕವಾಗಿ ಮೇಯುತ್ತಿದ್ದ ನವಿಲಿನ ಪಕ್ಕ ಗುಳ್ಳೆನರಿಯೊಂದು ಕುಳಿತಿತ್ತು. ಆರಂಭದಲ್ಲಿ ನಾಯಿ ಇರಬಹುದು ಅಂದುಕೊಂಡ ನಮಗೆ, ಅದರ ಮುಖಭಾವವು ಇದು ಗುಳ್ಳೆನರಿಯೇ ಎಂದು ಖಚಿತವಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ನವಿಲು ಯಾವ ಕ್ಷಣದಲ್ಲಾದರೂ ಗುಳ್ಳೆನರಿಗೆ ಆಹಾರವಾಗಬಹುದು ಅಂದುಕೊಂಡು, ಕಾರೊಳಗಿಂದಲೇ ಒಂದಿಷ್ಟು ಫೋಟೊಗಳನ್ನು ಕ್ಲಿಕ್ಕಿಸಿದೆವು.

ನೆಲಕ್ಕೊರಗಿ ಕುಳಿತಿದ್ದ ಗುಳ್ಳೆನರಿಯತ್ತ ಆಗಾಗ ವಾರೆಗಣ್ಣಿನ ನೋಟ ಬೀರುತ್ತಿದ್ದ ನವಿಲು, ಯಾವುದೇ ಬಿಂಕವಿಲ್ಲದೆ ಅದೇ ಜಾಗದಲ್ಲಿ ಗಿರಕಿ ಹೊಡೆಯುತ್ತಾ ಮೇಯುತ್ತಿತ್ತು. ಒಂದೇ ಜಿಗಿತಕ್ಕೆ ನವಿಲಿನ ಕುತ್ತಿಗೆ ಸಿಗುವಂತಿದ್ದರೂ, ಗುಳ್ಳೆನರಿ ಮಾತ್ರ ಒಂದಿನಿತೂ ಅಲುಗಾಡದೆ ದಿಟ್ಟಿಸುತ್ತಿತ್ತು. ಸುಮಾರು ಮೂವತ್ತು ನಿಮಿಷದವರೆಗೆ ಒಂದೇ ಕಡೆ ಇದ್ದ ಎರಡೂ, ಏನೋ ಸದ್ದು ಕೇಳಿದಂತೆ ಸುತ್ತಲೂ ತಿರುಗಿದವು. ನರಿ ಮೇಲಕ್ಕೆದ್ದು ಒಮ್ಮೆ ಮೈ ಕೊಡವಿ ಸುತ್ತಲೂ ದಿಟ್ಟಿಸಿತು. ನವಿಲಿನತ್ತ ಆತಂಕದ ನೋಟ ಬೀರಿ, ಕಾಡಿನೊಳಗೆ ಮಾಯವಾಯಿತು. ನವಿಲು ಸಹ ಒಂದೆರಡು ಸುತ್ತು ಅಲ್ಲೇ ಗಿರಕಿ ಹೊಡೆದು ಕಾಡಿನೊಳಕ್ಕೆ ರೆಕ್ಕೆ ಬಿಚ್ಚಿಕೊಂಡು ಹಾರಿಹೋಯಿತು.

ಪಕ್ಷಿ ಪ್ರಬೇಧದ ಬಹುತೇಕ ಜೀವಿಗಳನ್ನೂ ಬಿಡದೆ ಬೇಟೆಯಾಡುವ ಗುಳ್ಳೆನರಿ ಹಾಗೂ ತನ್ನೆದುರಿಗೆ ಕುಳಿತಿರುವುದು ಅಪಾಯಕಾರಿ ಪ್ರಾಣಿ ಎಂದು ಗೊತ್ತಿದ್ದರೂ ನಿರಾಂತಕವಾಗಿದ್ದ ನವಿಲು ವನ್ಯಜೀವಿ ಲೋಕದ ವಿಸ್ಮಯದಂತೆ ನಮಗೆ ಕಂಡವು.

ಪ್ರತಿಕ್ರಿಯಿಸಿ: feedback@sudha.co.in